ದಿನಾಂಕ : 18.09.2025 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಪಾಟೀ ಸವಾಲುಃ** 7 ನೇ ಪ್ರತಿವಾದಿ ಪರ **ಶ್ರೀ** ಎನ್.ಜೆ.ಪಿ. **ವಕೀಲರಿಂದ,**

ವಾದಿ ನಂಬರ್.1 ನನ್ನ ತಾಯಿ ಎಂದರೆ ಸರಿ. 3 ನೇ ವಾದಿರವರು ನನ್ನ ತಂಗಿ ಇರುತ್ತಾರೆ. ದೊಡ್ಡಬಸಪ್ಪ ನನ್ನ ತಂದೆ ಇರುತ್ತಾರೆ. ನಾವು 4 ಜನ ಹೆಣ್ಣು ಮಕ್ಕಳು ಮತ್ತು 4 ಜನ ಗಂಡು ಮಕ್ಕಳು ಇರುತ್ತೇವೆ. ನನಗೆ ತಂದೆ-ತಾಯಿ ಇಬ್ಬರು ಇಲ್ಲ ತೀರಿಕೊಂಡಿರುತ್ತಾರೆ. ಗಂಡು ಮಕ್ಕಳಲ್ಲಿ ಇಬ್ಬರು ತೀರಿಕೊಂಡಿರುತ್ತಾರೆ ಅವರ ಹೆಸರು ಗವಿಸಿದ್ದಪ್ಪ ಮತ್ತು ಶಣ್ಣಮುಕಪ್ಪ ಇರುತ್ತದೆ. ನಿಮಗೆ ಯಾವಾಗ ಮದುವೆ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಅಕ್ಕ-ತಂಗಿಯರ ಮದುವೆ ನನ್ನ ತಂದೆಯೇ ಮಾಡಿರುತ್ತಾರೆ. ನಾನು ಮತ್ತು ಇತರೆ ವಾದಿರವರು ಭಾಗ ಬೇಕು ಎಂದು ಈ ದಾವೆಯನ್ನು ಹಾಕಿರುತ್ತೇವೆ. ಯಾವ ಜಮೀನುಗಳು ಮತ್ತು ಮನೆಗಳ ಮೇಲೆ ಈ ದಾವೆಯನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ಹಾಕುವಾಗ ಅದರ ಮಾಹಿತಿಯನ್ನು ನಾವು ಕೊಟ್ಟಿಲ್ಲ ನನ್ನ ತಾಯಿಯವರು ಕೊಟ್ಟಿದ್ದರು. ಈ ದಾವೆಯಲ್ಲಿ ಏನು ವಿಷಯ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ನಂತರ ಭಾಗಕ್ಕೆ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಈ ದಾವಾ ಆಸ್ತಿಗಳು ನನ್ನ ತಾತ ಮತ್ತು ಅಜ್ಜಿರವರ ಆಸ್ತಿಗಳು ಇರುತ್ತದೆ. ಈ ದಾವಾ ಆಸ್ತಿಗಳು ನಿಮ್ಮ ತಾತ ಮತ್ತು ಅಜ್ಜಿರವರ ಆಸ್ತಿಗಳು ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಏನಾದರೂ ದಾಖಲೆಗಳನ್ನು

ಹಾಕಿರುವಿರಾ ಎಂದರೆ ಸಾಕ್ಷಿಯು ಅದೆಲ್ಲಾ ನನಗೆ ಗೊತ್ತಿಲ್ಲ ನಮಗೆ ಕರೆದುಕೊಂಡು ಹೋಗಿ ಹಾಕಿಸಿದರು ಎಂದು ನುಡಿಯುತ್ತಾರೆ.

2. ಸರ್ವೇ ನಂಬರ್.258, 14 ಎಕರೆ ಜಮೀನಿನಲ್ಲಿ ನನ್ನ ತಾಯಿಗೆ 6 ಎಕರೆ ಜಮೀನು ಬಿಟ್ಟು ಕೊಟ್ಟಿದ್ದರು ಎಂದರೆ ಸರಿ. ನಿಮ್ಮ ಅಣ್ಣ-ತಮ್ಮಂದಿರು ನಿಮ್ಮ ತಾಯಿಗೆ 6 ಎಕರೆ ಬಿಟ್ಟು ಕೊಟ್ಟಿದ ಬಗ್ಗೆ ಮುಟೇಷನ್ ಮತ್ತು ಪಹಣಿ ಆಗಿರುತ್ತದೆಯಾ ಎಂದರೆ ಸಾಕ್ಷಿಯು ಅದೆಲ್ಲಾ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಸದರಿ ಜಮೀನು ಮುಟೇಷನ್ ಮತ್ತು ಪಹಣಿ ಆಗಿದ್ದು ಅವರು 11 ನೇ ಪ್ರತಿವಾದಿರವರಿಗೆ ದಿನಾಂಕಃ 23.04.2004 ರಂದು ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಗಂಡನ ಮನೆಯಲ್ಲಿ ಇದ್ದೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮಾರಾಟ ಮಾಡಿದ ದಾಖಲೆಯನ್ನು ನಾನೇ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಗವಿಸಿದ್ದಪ್ಪ, ಶಣ್ಣಮುಕಪ್ಪ ಮತ್ತು ಬಸವನಗೌಡರವರ ಪಾಲಿಗೆ ಬಂದಂತಹ ಜಮೀನುಗಳು ಸರ್ಕಾರದವರು Acquire ಮಾಡಿರುತ್ತಾರೆ ಎಂದರೆ ಸರಿ. ಆ ದುಡ್ಡನ್ನು ಅವರೇ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಸರ್ವೇ ನಂಬರ್.258, 14 ಎಕರೆ ಜಮೀನಿನಲ್ಲಿ 6 ಎಕರೆ ಜಮೀನು ಹೋಗಿದ ನಂತರ ಉಳಿದ 7 ಎಕರೆ 56 ಸೆಂಟ್ಸ್ ಜಮೀನು ನಾಗೇಶಪ್ಪರವರಿಗೆ ಹೋಗಿರುತ್ತದೆ ಎಂದರೆ ಸರಿ. ಸರ್ಕಾರದವರು ಜಮೀನುಗಳನ್ನು Acquire ಮಾಡುವಾಗ

ಪಹಣಿಗಳು ಗವಿಸಿದ್ದಪ್ಪ, ಶಣ್ಣಮುಕ್ಕಪ್ಪ ಮತ್ತು ಬಸವನಗೌಡರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಾಗೇಶಪ್ಪ/ 7 ನೇ ಪ್ರತಿವಾದಿರವರ ಹೆಸರಿಗೆ 7 ಎಕರೆ 56 ಸೆಂಟ್ಸ್ ಜಮೀನಿನ ಪಹಣಿಗಳು ಮತ್ತು ಮುಟೇಷನ್ ಆಗಿ ಇವತ್ತಿನವರೆಗೆ ಅವರ ಹೆಸರಿನಲ್ಲೇ ಇರುತ್ತದೆ ಎಂದರೆ ಸರಿ. ನಾಗೇಶಪ್ಪ/ 7 ನೇ ಪ್ರತಿವಾದಿರವರ ಜಮೀನನ್ನು ಬಿಟ್ಟು ಈಗ ಪ್ರಸ್ತುತ ಯಾವುದೇ ಜಮೀನು ಬಾಕಿ ಇರುವುದಿಲ್ಲ ಎಂದರೆ ಸರಿ.

3. ನನ್ನ ಗಂಡನ ಊರು ಜಾನಿಕುಂಟೆ ಇರುತ್ತದೆ. ಜಾನಿಕುಂಟೆಯಿಂದ ವೇಣಿವಿರಾಪುರ ಊರು 3 ಕಿ.ಮೀ ಆಗುತ್ತದೆ. ನಾನು ಸರ್ವೇ ನಂಬರ್. 258 ನಾಗೇಶಪ್ಪರವರ ಜಮೀನನ್ನು ನೋಡಿರುತ್ತೇನೆ. ನಾಗೇಶಪ್ಪರವರು ಅದರಲ್ಲಿ ಮನೆ ಕಟ್ಟಿರುತ್ತಾರೆ ಕೆಳಗಿನ ಭಾಗವನ್ನು ಬ್ಯಾಂಕ್ ಗೆ ಬಾಡಿಗೆಗೆ ಕೊಟ್ಟಿರುತ್ತಾರೆ ಮತ್ತು ಮೇಲಿನ ಮನೆಯಲ್ಲಿ ಅವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಾಗೇಶಪ್ಪರವರು ಅವರಿಗೆ ಬಂದ ಭಾಗವನ್ನು ಎರಿಸೆಲ್ ಕಂಪನಿರವರಿಗೆ ಲಿಜ್‌ಗೆ/Lease ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾಗೇಶಪ್ಪರವರಿಗೆ ಬಂದ ಭಾಗವು ವೇಣಿವಿರಾಪುರ ಊರಿಗೆ ಅಂಟಿಕೊಂಡು ಬಂದಿರುತ್ತದೆ ಎಂದರೆ ಸರಿ. ನಾಗೇಶಪ್ಪರವರ ಪಾಲಿಗೆ ಬಂದ ಭೂಮಿಯಲ್ಲಿ ಅವರು ನಾಗಮ್ಮರವರಿಗೆ 30X40 ಅಡಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಜಾಗದಲ್ಲಿ ಅವರು ಕುಟುಂಬದ ಸಹಿತ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ಅಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಆ

ಮನೆ ಏಳುಬೆಂಚಿ ಗ್ರಾಮ ಪಂಚಾಯತಿಗೆ ಸೇರಿದ್ದು ಅದರ ಅಸೆಸ್ ಮೆಂಟ್ ಕೂಡ ಆಗಿರುತ್ತದೆ ಅದರ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿಯಲ್ಲ. ಅದಕ್ಕೆ ನೀರು ಮತ್ತು ಕರೆಂಟ್ ರ connection ಕೂಡ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾಗೆಶಪ್ಪರವರು 15X40 ಅಡಿಯನ್ನು ಬಸಯ್ಯ ಮತ್ತು ಮಲ್ಲಿಕಾರ್ಜುನರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾಗೇಶಪ್ಪರವರು ಅಳಮ್ಮ ಗಂಡ ಶಿವಮೂರ್ತಿರವರಿಗೆ ಕೂಡ ಮಾರಾಟ ಮಾಡಿರುತ್ತಾರೆ ಮತ್ತು ಅವರು ಅಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅವರು ಚಾಂದ್ ಬಾಷರವರಿಗೆ ಮಾರಾಟ ಮಾಡಿರುತ್ತಾರೆ ಚಾಂದ್ ಬಾಷರವರು ಅದರಲ್ಲಿ ಮನೆ ಕಟ್ಟಿಕೊಂಡು ಕುಟುಂಬ ಸಮೇತ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಮನೆಗಳಿಗೆ ಏಳುಬೆಂಚಿ ಗ್ರಾಮ ಪಂಚಾಯತಿಯಿಂದ ಅಸೆಸ್ ಮೆಂಟ್ ಆಗಿರುತ್ತದೆ ಮತ್ತು ಸದರಿ ಮನೆಗಳಿಗೆ ನೀರಿನ ಮತ್ತು ಕರೆಂಟ್ ನ connection ಇರುತ್ತದೆ ನನಗೆ ಅದರ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ.

4. ನಮಗೂ ಮತ್ತು 7 ನೇ ಪ್ರತಿವಾದಿಗೂ 15-20 ವರ್ಷಗಳಿಂದ ಸಂಬಂಧ ಇಲ್ಲ ಹೋಗುವುದು ಬರುವುದು ಮಾಡುತ್ತಿಲ್ಲ ಎಂದರೆ ಸರಿ. ಈಗ ಸಾಕ್ಷಿಗೆ ನಿಪಿ.26 ತೋರಿಸಿ ಅದು ನೀವು ಆಗಲೀ ನಿಮ್ಮ ತಾಯಿ ಆಗಲಿ ನ್ಯಾಯಾಲಯಕ್ಕೆ ಹಾಕಿರುವ ದಾಖಲೆ ಇರುತ್ತದೆ ಅದರಲ್ಲಿ ದಿನಾಂಕಃ 11.12.87 ರಲ್ಲಿ ಭಾಗ ಆಗಿರುತ್ತದೆ ಎಂದು ಬರೆದಿರುತ್ತದೆ

ಎಂದರೆ ಸಾಕ್ಷಿಯು ಇಷ್ಟು ಇಷ್ಟು ಕೊಟ್ಟು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲು** 7 ನೇ ಪ್ರತಿವಾದಿ ಪರ ವಕೀಲರ **ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.)**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2** ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ